# ಮುಕ್ತಿಗೆ ದಾರಿ



✽ ಬಂಧನಕ್ಕೆ ಕಾರಣ ಕಾಮಕಾಂಚನ. ಕಾಮಕಾಂಚನವೇ ಸಂಸಾರ. ಕಾಮಕಾಂಚನವೇ ಭಗವಂತನ ದರ್ಶನ ಮಾಡಲು ಬಿಟ್ಟುಕೊಡಲೊಲ್ಲದು. (ಒಂದು ಚೌಕವನ್ನು ತಮ್ಮ ಮುಖದ ಎದುರು ಹಿಡಿದುಕೊಂಡು) ಈಗ ನನ್ನ ಮುಖ ನಿಮಗೆ ಕಾಣುವುದೆ? ಇಲ್ಲ. ಆವರಣವೆಂಬುದು ಇದೇ. ಈ ಕಾಮಕಾಂಚನವೆಂಬ ಆವರಣ ಹೋಯಿತು ಎಂದರೆ ಚಿದಾನಂದನ ಸಾಕ್ಷಾತ್ಕಾರ.

✽ ಮುಖ್ಯವಾಗಿ ಮಾಡಬೇಕಾದುದೇನೆಂದರೆ, ಹೇಗಾದರೂ ಮಾಡಿ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸಬೇಕು. ಒಮ್ಮೆಯೂ ಆತನನ್ನು ಮರೆಯಕೂಡದು. ಅದು ತೈಲಧಾರೆಯಂತೆ ಅವಿಚ್ಛಿನ್ನವಾಗಿರಬೇಕು. ಒಂದು ಇಟ್ಟಿಗೆಯನ್ನೇ ಆಗಲಿ ಒಂದು ಕಲ್ಲನ್ನೇ ಆಗಲಿ ಅದೇ ಭಗವಂತ ಎಂದು ಭಾವಿಸಿ ಶ್ರದ್ಧಾಭಕ್ತಿಯಿಂದ ಪೂಜಿಸುವುದಾದರೆ, ಅದರಿಂದಲೇ, ಭಗವಂತನ ಕೃಪೆಯಿಂದ ಆತನ ದರ್ಶನ ದೊರೆತುಬಿಡುವ ಸಂಭವ.

✽ ಸಂಸಾರದಲ್ಲಿ ಇರಬೇಕಾಗಿದ್ದರೆ ಸತ್ಯವಚನದಲ್ಲಿ ಅಚಲ ಶ್ರದ್ಧೆ ಇರಬೇಕು. ಸತ್ಯದಿಂದಲೇ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು.

✽ ಯಾರಿಗೆ ಸಮಯವಿರುವುದೋ, ಅವರು ಧ್ಯಾನ, ಭಜನೆ ಮಾಡಲೇಬೇಕು. ಆದರೆ ಯಾರಿಗೆ ಸಮಯವಿಲ್ಲವೋ ಅವರು ದಿನಕ್ಕೆ ಎರಡು ವೇಳೆ ಹೃತ್ಪೂರ್ವಕವಾಗಿ ಭಗವಂತನಿಗೆ ನಮಸ್ಕಾರ ಹಾಕಲಿ. ಆತ ಅಂತರ್ಯಾಮಿ. ಆತನಿಗೆ ಗೊತ್ತಿದೆ. ಇವರು ಇನ್ನೇನು ತಾನೆ ಮಾಡಿಯಾರು, ಇವರಿಗೆ ಬೇಕಾದಷ್ಟು ಕೆಲಸಕಾರ್ಯಗಳಿವೆಯಲ್ಲ, ಪಾಪ ಎಂದು. ಆತನನ್ನು ಪ್ರಾರ್ಥಿಸಲು ನಿಮಗೆ ಸಮಯವಿಲ್ಲ; ಆದ್ದರಿಂದ ಆತನಿಗೆ ನಿಮ್ಮ ವಕಾಲತ್ತನ್ನು ವಹಿಸಿಬಿಡಿ. ಆದರೆ ನೋಡಿಕೊಳ್ಳಿ. ಆತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳದೆ ಹೋದಿರಿ ಎಂದರೆ, ಆತನ ದರ್ಶನವನ್ನು ಮಾಡಿಕೊಳ್ಳದೆ ಹೋದಿರಿ ಎಂದರೆ, ಜೀವನ ಬರಿದೆ ವ್ಯರ್ಥ.

✽ ತ್ಯಾಗವನ್ನು ಮಾಡದೆ ಭಗವಂತನ ಸಾಕ್ಷಾತ್ಕಾರವನ್ನು ಪಡೆಯುವ ಬಗೆ ಹೇಗೆ? ಒಂದು ವಸ್ತುವಿನ ಮೇಲೆ ಇನ್ನೊಂದು ವಸ್ತುವನ್ನು ಇಟ್ಟಿದೆ ಅಂತ ಇಟ್ಟುಕೊ. ಮೇಲಿನದನ್ನು ತೆಗೆಯದೆ ಕೆಳಗಿನದನ್ನು ತೆಗೆದುಕೊಳ್ಳುವ ಬಗೆ ಹೇಗೆ?

✽ ನಿಷ್ಕಾಮ ಭಾವನೆಯಿಂದ ಭಗವಂತನಿಗೆ ಪ್ರಾರ್ಥನೆ ಮಾಡಬೇಕು. ಆದರೆ ಸಕಾಮ ಭಾವನೆಯಿಂದ ಪ್ರಾರ್ಥನೆ ಮಾಡುತ್ತ ಮಾಡುತ್ತ ಕೊನೆಗೆ ಅದು ನಿಷ್ಕಾಮ ಭಾವನೆಯಾಗಿ ಪರಿಣಮಿಸಿಬಿಡುತ್ತದೆ. ಧ್ರುವ ರಾಜ್ಯಕ್ಕಾಗಿ ತಪಸ್ಸು ಮಾಡಿದ. ಆದರೆ ಕೊನೆಯಲ್ಲಿ ಆತನಿಗೆ ಭಗವಂತನ ದರ್ಶನ ದೊರೆಯಿತು. ಆತ ಹೇಳಿದ: ‘ಗಾಜಿನ ಮಣಿಗಾಗಿ ಹುಡುಕುತ್ತಿರುವಾಗ ಚಿನ್ನ ದೊರೆತುದೇ ಆದರೆ ಅದನ್ನಾರು ಬಿಟ್ಟುಬಿಡುತ್ತಾರೆ?’

✽ ಸತ್ತ್ವಗುಣ ಉಂಟಾದಾಗ ಮಾತ್ರ ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಬಹುದು. ದಾನಾದಿ ಕರ್ಮಗಳನ್ನು ಸಂಸಾರಿಗಳು ಪ್ರಾಯಿಕವಾಗಿ ಸಕಾಮಭಾವನೆಯಿಂದಲೇ ಮಾಡುತ್ತಾರೆ. ಅದು ಒಳ್ಳೆಯದಲ್ಲ. ಅದನ್ನು ನಿಷ್ಕಾಮ ಭಾವನೆಯಿಂದ ಮಾಡಿದರೆ ಅದು ಬಹಳ ಒಳ್ಳೆಯದು. ಆದರೆ ಹಾಗೆ ಮಾಡುವುದು ಬಹಳ ಕಠಿಣವೇನೋ ನಿಜ.

✽ ಮಗುವಿನಂಥ ವಿಶ್ವಾಸಬೇಕು. ಮಗು ತಾಯನ್ನು ನೋಡಲು ಯಾವ ರೀತಿಯಾದ ವ್ಯಾಕುಲತೆಯನ್ನು ತೋರಿಸುವುದೊ, ಆ ರೀತಿಯಾದ ವ್ಯಾಕುಲತೆ ಬೇಕು. ಅಂಥ ವ್ಯಾಕುಲತೆ ಉಂಟಾಯಿತು ಎಂದರೆ ಅರುಣೋದಯವಾದ ಹಾಗೆಯೇ. ಅರುಣೋದಯವಾದ ನಂತರ ಸೂರ್ಯೋದಯವಾಗಲೇ ಬೇಕು. ಅಂಥ ವ್ಯಾಕುಲತೆಯುಂಟಾದ ಒಡನೆಯೇ ಭಗವಂತನ ದರ್ಶನ ದೊರೆಯುತ್ತದೆ.

✽ ಸಂಸಾರದಲ್ಲಿದ್ದು ಸಾಧನೆ ಮಾಡುವುದು ಎಂದರೆ ಬಹಳ ಕಷ್ಟ. ಅನೇಕ ಪ್ರತಿಕೂಲಗಳಿವೆ: ರೋಗ, ಶೋಕ, ದಾರಿದ್ರ್ಯ, ಹೆಂಡತಿಯೊಡನೆ ಒಮ್ಮನಸ್ಸಿಲ್ಲದಿರುವುದು, ಅವಿಧೇಯ, ಮೂರ್ಖ, ಹಠಮಾರಿ ಮಕ್ಕಳು ಹುಟ್ಟುವುದು ಇತ್ಯಾದಿ. ನಾನೇನೂ ನಿಮಗೆ ಇವುಗಳ ಪಟ್ಟಿಯನ್ನು ಕೊಡಬೇಕಾಗಿಲ್ಲ. ಆದರೂ ಮಾರ್ಗವಿದೆ. ಆಗಾಗ ನಿರ್ಜನಪ್ರದೇಶಕ್ಕೆ ಹೋಗಿ ಭಗವಂತನಿಗೆ ಪ್ರಾರ್ಥನೆ ಸಲ್ಲಿಸಬೇಕು. ಆತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಬೇಕು.

✽ ಒಂದು ಸ್ವಲ್ಪ ಜಪಮಾಡಿ ಉದ್ದೀಪನವಾಗಿಬಿಟ್ಟ ಮಾತ್ರಕ್ಕೇ ಭಾವಿಸಬೇಕಾಗಿಲ್ಲ ದೊರೆಯಬೇಕಾದ್ದೆಲ್ಲ ದೊರೆತುಬಿಟ್ಟಿತು ಎಂದು. ಕರ್ಮ ಎಂದಿಗೂ ಜೀವನದ ಉದ್ದೇಶವಲ್ಲ. ಇನ್ನೂ ಮುಂದುವರಿ; ಆಗ ಕರ್ಮವನ್ನು ನಿಷ್ಕಾಮಭಾವನೆಯಿಂದ ಮಾಡಲು ಸಾಧ್ಯವಾಗುತ್ತದೆ. ಆದರೆ ನಿಷ್ಕಾಮಕರ್ಮ ಮಾಡುವುದು ಬಹಳ ಕಷ್ಟ. ಆದ್ದರಿಂದ ಭಕ್ತಿಯಿಂದೊಡಗೂಡಿದ ವ್ಯಾಕುಲತೆಯಿಂದ ಭಗವಂತನಿಗೆ ಪ್ರಾರ್ಥನೆ ಸಲ್ಲಿಸು; ‘ಹೇ ಭಗವಂತ, ನಿನ್ನ ಪಾದಪದ್ಮಗಳಲ್ಲಿ ನನಗೆ ಭಕ್ತಿಯುಂಟಾಗುವಂತೆ ಮಾಡು. ಕೆಲಸಗಳನ್ನು ಕಡಮೆ ಮಾಡಿಕೊಡು.ಯಾವ ಯಾವ ಕೆಲವು ಕರ್ಮಗಳನ್ನು ನಾನು ಮಾಡಲೇಬೇಕಾಗಿರುವುದೋ ಅವನ್ನು ನಿಷ್ಕಾಮಭಾವನೆಯಿಂದ ಮಾಡಲು ಶಕ್ತವಾಗುವಂತೆ ಮಾಡು.’ ಇನ್ನೂ ಮುಂದುವರಿದರೆ ಭಗವಂತನ ಸಾಕ್ಷಾತ್ಕಾರ ದೊರೆಯುತ್ತದೆ. ಕ್ರಮೇಣ ಆತನೊಡನೆ ನೀನು ಮಾತುಕತೆಯನ್ನೂ ಆಡಬಹುದು.

ಶ್ರೀರಾಮಕೃಷ್ಣ ವಚನವೇದದಿಂದ